ಅದರಲ್ಲಿ ಭಾಗವಹಿಸಿದ್ದರು, ಅವರುಗಳು ನಾಲ್ಕು ರೂಪಾಯಿ ಚಿಲ್ಲರೆ, ಐದು ರೂಪಾಯಿ ಚಿಲ್ಲರೆ ರೇಟ್‌ನ್ನು ಹೇಳಿದ್ದಾರೆ, ಐದಾರು ಜನರು ಯಾರು ಟೆಂಡರ್‌ನಲ್ಲಿ ಭಾಗವಹಿಸಿದ್ದರು, ಆ ಐದಾರು ಜನರಲ್ಲಿ ಇವರು ಇರಲಿಲ್ಲ, ಅಭಿವಾನಿ ಪ್ರಕಾಶನದವರು ಭಾಗವಹಿಸಿರಲಿಲ್ಲ, ಅನಂತರ ಅವರಿಗೆ ಆದೇಶವನ್ನು ಕೊಟ್ಟಿದ್ದಾರೆ. ಅದನ್ನು ಯಾವ ಸನ್ನಿವೇಶದಲ್ಲಿ ಕೊಟ್ಟರು? ಈ ಆದೇಶವನ್ನು ಕೊಟ್ಟದ್ದರಿಂದ ಸರಕಾರಕ್ಕೆ ಏನಾದರೂ ಅಗತ್ಯವಾಗಿ ಹೆಚ್ಚು ಹಣವನ್ನು ಕೊಡತಕ್ಕಂಥ ಹೊರೆ ಬಿತ್ತೇ? ಈ ಎಲ್ಲಾ ವಿಚಾರಗಳನ್ನು ಸಂಕ್ಷಿಪ್ತವಾಗಿ ಪಬ್ಲಿಕ್ ಅಕೌಂಟ್ಸ್ ಸಮಿತಿಗೆ ನಾನು ವಹಿಸಿಕೊಡುತ್ತಾ ಇದ್ದೇನೆ. ಒಂದು ತಿಂಗಳ ಒಳಗಾಗಿ ಅವರು ನಮಗೆ ವರದಿಯನ್ನು ಕೊಡಬೇಕು. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳು**

ಹುನುಗುಂದ ತಾಲ್ಲೂಕಿನ ಹಿರೇಮಾಗಿ ಕೂಡು ರಸ್ತೆ.

302( 1991)

ಶ್ರೀ ರಾಜಶೇಖರ ಶೀಲವಂತ ವೀರಣ್ಣ(ಗುಳೇದಗುಡ್ಡ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಳೆದ ಕೆಲವು ವರ್ಷಗಳಲ್ಲಿ ಗುಳೇದಗುಡ್ಡ ಮತಕ್ಷೇತ್ರದ ಹುನಗುಂದ ತಾಲ್ಲೂಕಿನ ಹಿರೇಮಾಗಿ ಕೂಡು ರಸ್ತೆ( ಕೆರೆ ದಡದಿಂದ ಕಬ್ಬಿಣ ಕಣಿವೆಗೆ ಹೋಗುವ ರಸ್ತೆ) ಕಾಮಗಾರಿಯನ್ನು ತಾಲ್ಲೂಕು ಪಂಚಾಯತ್ ವತಿಯಿಂದ ಅಥವಾ ಜಿಲ್ಲಾ ಪಂಚಾಯತ್ ವತಿಯಿಂದ ಕೈಗೊಳ್ಳಲಾಗಿತ್ತೆಂಬುದು ನಿಜವೇ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ಹಾಗೂ ಅದಕ್ಕೆ ಒದಗಿಸಿದ ಹಣ ಎಷ್ಟು?

ಇ) ಸದರಿ ರಸ್ತೆ ನಿರ್ಮಾಣ ಕಾರ್ಯವನ್ನು ಸಂಬಂಧಿಸಿದ ಅಧಿಕಾರಿಗಳು ಪರಿವೀಕ್ಷಣೆ ಮಾಡಿರುವರೇ, ಹಾಗಿದ್ದಲ್ಲಿ ಅದು ಈಗ ಯಾವ ಪರಿಸ್ಥಿತಿಯಲ್ಲಿದೆ?

ಶ್ರೀ ಎಂ.ಪಿ.ಪ್ರಕಾಶ್( ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):

ಅ) ನಿಜ

ಆ) ಅಂದಾಜು ವೆಚ್ಚ ರೂ. ೨.೧೫ ಲಕ್ಷ

ಖರ್ಚಾದ ಹಣ ರೂ. ೨.೦೨ ಲಕ್ಷ

ಇ) ಹುಣಗುಂದ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ಕಾಮಗಾರಿಯನ್ನು ಪರಿಶೀಲಿಸಿರುತ್ತಾರೆ. ರಸ್ತೆ ನಿರ್ಮಾಣ ಪೂರ್ಣಗೊಂಡಿದ್ದು, ಈಗ ಅದನ್ನು ಉಪಯೋಗಿಸಲಾಗುತ್ತಿದೆ.

ಶ್ರೀ ರಾಜಶೇಖರ ಶೀಲವಂತ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ಅಂದಾಜು ವೆಚ್ಚ ಮತ್ತು ಖರ್ಚಾದ ಹಣವನ್ನು ತಿಳಿಸಿದ್ದಾರೆ. ಈ ರಸ್ತೆಯನ್ನು ಹುಣಗುಂದ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಕೂಡ ಪರಿವೀಕ್ಷಣೆ ಮಾಡಿ ರಸ್ತೆಯು ಪೂರ್ಣಗೊಂಡಿದೆ ಎಂಬುದನ್ನು ಕೂಡ ಕಾಣಿಸಿದ್ದಾರೆ. ರಸ್ತೆಯನ್ನು ಜನರು ಮೊದಲಿಂದಲೂ ಉಪಯೋಗಿಸುತ್ತಾ ಇದ್ದಾರೆ. ಇಲ್ಲಿ ಇವರು 2 ಲಕ್ಷ 12 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಬಹುಶಃ ಇದರಲ್ಲಿ 20 ಸಾವಿರ ರೂಪಾಯಿಗಳನ್ನು ಕೂಡ ಇವರು ಖರ್ಚು ಮಾಡಿರಲಿಕ್ಕಿಲ್ಲ. ನಾನು 6-7 ತಿಂಗಳ ಹಿಂದೆ ಜನಸಂಪರ್ಕ ಸಭೆಯ ನಿಮಿತ್ತ ಭೇಟಿ ಕೊಟ್ಟಾಗ ಅಲ್ಲಿನ ಗ್ರಾಮಸ್ಥರು ಈ ಕೆಲಸದ ಬಗ್ಗೆ ಅವ್ಯವಹಾರ ನಡೆದಿದೆ, ಸಂಬಂಧಪಟ್ಟವರು ಹಣವನ್ನು ತಿಂದು ಹಾಕಿದ್ದಾರೆ, ಎಂಬಿತ್ಯಾದಿ ಆರೋಪಣೆಗಳನ್ನು ಮಾಡಿದ್ದರು. ನಾನು ಹೊಸತಾಗಿ ಬಂದಂಥ ಇಒ ರವರನ್ನು ಕರೆದುಕೊಂಡು ಹೋಗಿ ಪರಿಶೀಲನೆ ಮಾಡಿಬಂದಿದ್ದೇನೆ. ಅಲ್ಲಿ 25 ಸಾವಿರ ರೂಪಾಯಿಗಳನ್ನು ಕೂಡ ಖರ್ಚು ಮಾಡಿಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಜೆಲ್ಲಿ, ಮಣ್ಣು ಕೂಡ ಹಾಕಿಲ್ಲ. ಎಲ್ಲೋ ಒಂದು ಸ್ವಲ್ಪ ಕಡೆಗಳಲ್ಲಿ ಮೊರಂ ಹಾಕಿ ರಸ್ತೆಯನ್ನು ಅಷ್ಟಕ್ಕೆ ಬಿಟ್ಟಿದ್ದಾರೆ ಹೊರತಾಗಿ ರಸ್ತೆಯನ್ನು ಪೂರ್ಣಗೊಳಿಸಿಲ್ಲ. ಆ ದೃಷ್ಟಿಯಿಂದ ಇದನ್ನು ತನಿಖೆ ಮಾಡಿಸಬೇಕು. ಪುನಃ ಇದನ್ನು ಆರ್‌ಡಿಪಿಆರ್‌ನಿಂದ ಮಾಡಿಸಿದರೆ ಸರಿ ಹೋಗುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಂದ ತನಿಖೆಯನ್ನು ಮಾಡಿಸಿ ಸೂಕ್ತ ವರದಿಯನ್ನು ತರಿಸಿಕೊಂಡು ಸಂಬಂಧಪಟ್ಟವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ಅಲ್ಲಿ ಒಟ್ಟು 2 ಲಕ್ಷದ 12 ಸಾವಿರ ರೂಪಾಯಿಗಳ ಖರ್ಚು ಆಗಿಲ್ಲ, ಕಾಮಗಾರಿಯು ಕೂಡ ಕಳಪೆಯಾಗಿದೆ ಎಂದು ತಮ್ಮ ಆಪಾದನೆಯಾಗಿದೆ. ಅಲ್ಲಿ ತಿರ್ಲಾಪುರ ಎಂದು ಹೊಸ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಬಂದಿದ್ದಾರೆ. ಅವರಿಂದ ನಾನು ತನಿಖೆಯನ್ನು ಮಾಡಿಸುತ್ತೇನೆ. ಆದರಿಂದ ಮಾನ್ಯ ಶಾಸಕರಿಗೆ ಸಮಾಧಾನವಾಗಿಲ್ಲ ಅಂದರೆ ಜಿಲ್ಲಾಧಿಕಾರಿಗಳಿಂದಲೇ ಎಂಟು ದಿನಗಳ ಒಳಗಾಗಿ ತನಿಖೆ ಮಾಡಿಸಿ ವರದಿ

ಒಪ್ಪಿಸಲು ಹೇಳುತ್ತೇನೆ. ಅಕಸ್ಮಾತ್ ಕಳಪೆ ಕಾಮಗಾರಿಯಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರಾಜಶೇಖರ ಶೀಲವಂತ : ಜಿಲ್ಲಾಧಿಕಾರಿಗಳಿಂದ ತನಿಖೆ ಮಾಡಿಸಿರಿ.

ಶ್ರೀ ಎಂ.ಸಿ.ಪ್ರಕಾಶ್: ಜಿಲ್ಲಾಧಿಕಾರಿಗಳಿಂದಲೇ ತನಿಖೆ ಮಾಡಿಸುತ್ತೇನೆ.

1587

ಶ್ರೀ ಯು.ಬಿ.ಬಣಕಾರ್: ಮಾನ್ಯ ಅಧ್ಯಕ್ಷರೆ, ಪ್ರಶ್ನೆ 1587ನ್ನು ಕೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಜವಳಿ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನಾಳೆ ಒದಗಿಸುತ್ತೇನೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಶ್ರೀನಿಧಿ ಬಡಾವಣೆಯಲ್ಲಿ ಸೌಕರ್ಯಗಳ ಕೊರತೆ.

308( 1992)

ಶ್ರೀ ಎಸ್.ಆಂಗಾರ್(ಸೂಳ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್‌ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೊತ್ತನೂರು: ಮತ್ತು ಚುಂಚಘಟ್ಟ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಶ್ರೀನಿಧಿ ಬಡಾವಣೆಯಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಾದ ರಸ್ತೆ, ಬೀದಿ ದೀಪ, ಚರಂಡಿ, ಒಳಚರಂಡಿ ವ್ಯವಸ್ಥೆ ಮುಂತಾದವು ಇಲ್ಲದಿರುವುದರಿಂದ ಆ ಬಡಾವಣೆಯ ನಾಗರೀಕರು ಎದುರಿಸುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಬಡಾವಣೆಯ ನಿವಾಸಿಗಳು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಇ) ಶ್ರೀನಿಧಿ ಬಡಾವಣೆಯ ಜೊತೆಗೆ ಸುತ್ತಮುತ್ತಲಿನ ಸೌಧಾಮನಿ ಬಡಾವಣೆ, ಆರ್‌ಬಿಐ. ಬಡಾವಣೆ, ಗೌರವ ನಗರ, ಕೃಷ್ಣನಗರ ಮುಂತಾದ ಬಡಾವಣೆಗಳನ್ನು ಬೊಮ್ಮನಹಳ್ಳಿ ನಗರಸಭೆಯ ವ್ಯಾಪ್ತಿಗಾಗಲೀ, ಬೆಂಗಳೂರು ಮಹಾನಗರಪಾಲಿಕೆಯ